ಅನುಬಂಧ 1

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : (211) 90
ಸದಸ್ಯರ ಹೆಸರು : ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ
(ಸಹಕಾರ ಸಚಿವರು (ಲಕ್ಷ್ಮೀಶಾ ಸ. ಸವದಿ)

ಕ್ರ ಸಂ	ಪ್ರಶ್ನೆ	:	ಉತ್ತರ
ಅ.	ಅಪೆಕ್ಸ್ ಬ್ಯಾಂಕಿನ ವೆಸ್ಟ್ ಆಫ್ ಕಾರ್ಡ್ ರೋಡ್ 2ನೇ ಹಂತದ ಶಾಖೆಯಲ್ಲಿ ಹಣ ದುರುಪಯೋಗವಾಗಿರುವ ಬಗ್ಗೆ ನಡೆಯುತ್ತಿರುವ ತನಿಖೆ ಈಗ ಯಾವ ಹಂತದಲ್ಲಿದೆ (ವಿವರ ನೀಡುವುದು)	:	ಅಪೆಕ್ಸ್ ಬ್ಯಾಂಕಿನ ವೆಸ್ಟ್ ಆಫ್ ಕಾರ್ಡ್ ರೋಡ್ 2ನೇ ಹಂತದ ಶಾಖೆಯಲ್ಲಿ ಹಣ ದುರುಪಯೋಗವಾಗಿರುವ ಬಗ್ಗೆ ಬ್ಯಾಂಕಿನ ವತಿಯಿಂದ ನಡೆದ ಪರಿವೀಕ್ಷಣೆಯು ದಿನಾಂಕ: 14.12.1992 ರಂದು ಹಾಗೂ ಸಿ.ಒ.ಡಿ. ತನಿಖೆಯು 2001 ನೇ ಸಾಲಿನಲ್ಲಿ ಪೂರ್ಣಗೊಂಡಿರುತ್ತದೆ.
ಆ.	ಈ ಪ್ರಕರಣ ಯಾವಾಗ ಪತ್ತೆಯಾಯಿತು. ಬ್ಯಾಂಕಿನಲ್ಲಿ ಎಷ್ಟು ಹಣ ದುರುಪಯೋಗವಾಗಿದೆ. ಇದರಲ್ಲಿ ಭಾಗಿಯಾಗಿರುವವರು ಯಾರು (ಹೆಸರುಗಳ ಸಮೇತ ವಿವರ ಒದಗಿಸುವುದು.	:	ಈ ಪ್ರಕರಣ ದಿನಾಂಕ: 06.11.1992 ರಂದು ಪರಿವೀಕ್ಷಣೆಯ ಸಮಯದಲ್ಲಿ ಕಂಡುಬಂದಿದ್ದು ದಿನಾಂಕ: 14.12.1992 ರ ಪರಿವೀಕ್ಷಣೆಯ ಅಂತಿಮ ವರದಿಯಲ್ಲಿ ಪತ್ತೆಯಾಗಿರುತ್ತದೆ. ಈ ಪ್ರಕರಣದಲ್ಲಿ ರೂ.5.13.50.629.99 ಗಳಷ್ಟು ಹಣ ದುರುಪಯೋಗವಾಗಿರುತ್ತದೆ. ಸದರಿ ಪ್ರಕರಣದಲ್ಲಿ 21 ಜನ ನೇರವಾಗಿ ಮತ್ತು 07 ಜನ ಪರೋಕ್ಷವಾಗಿ ಭಾಗಿಯಾಗಿರುತ್ತಾರೆ. ವಿವರವನ್ನು ಅನುಬಂಧ –Iರಲ್ಲಿ ಲಗತ್ತಿಸಿದೆ.

ಇ.	ಆ ಪೈಕಿ ಇಲ್ಲಿಯವರೆವಿಗೂ ಬದುಕಿರುವವರ ಹಾಗೂ ನಿಧನವಾಗಿರುವವರ ಒಟ್ಟು ಸಂಖ್ಯೆ ಎಷ್ಟು.	:	ಒಟ್ಟು 28 ಜನರ ಪೈಕಿ 6 ಜನ ನಿಧನರಾಗಿದ್ದು 22 ಜನ ಬದುಕಿರುತ್ತಾರೆ.
ಈ.	ಇಲ್ಲಿಯವರೆವಿಗೆ ಈ ಪ್ರಕರಣದಲ್ಲಿ ವಿವಿಧ ನ್ಯಾಯಾಲಯಗಳ ಯಾವ ಯಾವ ತೀರ್ಪು ನೀಡಿವೆ (ಪೂರ್ಣ ವಿವರ ನೀಡುವುದು)?		ಹಣ ದುರುಪಯೋಗದಲ್ಲಿ ನೇರವಾಗಿ ಭಾಗಿಯಾಗಿರುವ 9 ಜನ ಆರೋಪಿಗಳ ವಿರುದ್ದು ಸಿಓಡಿಯವರು 21 ಕ್ರಿಮಿನಲ್ ಮೊಕದ್ದಮ್ಮೆಗಳನ್ನು ನ್ಯಾಯಾಲಯದಲ್ಲಿ ಹೂಡಿದ್ದು ಈ ಪೈಕಿ ಒಂದು ಪ್ರಕರಣದಲ್ಲಿ ಆರೋಪಿಯಾದ ಶ್ರೀ ಅಣ್ಣೇಗೌಡ ಇವರಿಗೆ 3 ವರ್ಷಗಳ ಶಿಕ್ಷೆ ಜೊತೆಗೆ ರೂ.15.000.00 ದಂಡ ವಿಧಿಸಲಾಗಿರುತ್ತದೆ. ಆರೋಪಿಗಳಾದ ದಿವಗಂತ ಬಿ.ಎನ್.ಜಗನ್ನಾಥ್ ಮತ್ತು ದಿ. ಎಂ.ನಾರಾಯಣ ರೆಡ್ಡಿಯವರು ನಿಧನವಾಗಿರುವುದರಿಂದ ಈ 2 ಪ್ರಕರಣಗಳನ್ನು ಖುಲಾಸೆಗೊಳಿಸಲಾಗಿದೆ. ಮತ್ತೊಂದು ಪ್ರಕರಣದಲ್ಲಿ ಆರೋಪಿಯಾದ ಶ್ರೀ ಟಿ. ಸತ್ಯನಾರಾಯಣ ರವರು ಖುಲಾಸೆಗೊಂಡಿದ್ದು. ರಾಜ್ಯ ಸರ್ಕಾರದ ಪರವಾಗಿ ಸಿಓಡಿಯವರು ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ. ಉಳಿದ 17 ಪ್ರಕರಣಗಳು ಎಂಟನೇ ಅಡಿಶನಲ್ Chief Metropolitan Magistrate ನ್ಯಾಯಾಲಯ. ಬೆಂಗಳೂರು ಇವರಲ್ಲಿ ವಿಚಾರಣೆಯಲ್ಲಿರುತ್ತದೆ. ಇದಲ್ಲದೆ ಸಹಕಾರ ಸಂಘಗಳ ಅಪರ ನಿಬಂದಕರು (ಕೈಗಾರಿಕೆ ಮತ್ತು ಇತರೆ) ಇವರ ನ್ಯಾಯಾಲಯದಲ್ಲಿ 3 ಸಿವಿಲ್

			ದಾವೆಗಳನ್ನು ಹೂಡಲಾಗಿದ್ದು 2 ಪ್ರಕರಣಗಳನ್ನು ಆದೇಶಕ್ಕಾಗಿ ಕಾದಿರಿಸಿದೆ. ಹಾಗೂ 1 ಪ್ರಕರಣ ವಿಚಾರಣಾ ಹಂತದಲ್ಲಿದೆ. ಇದಲ್ಲದೆ ಪ್ರಮುಖ ಪ್ರತಿ ವಾದಿಗಳ ಆಸ್ತಿಯನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 103 ರ ಪ್ರಕಾರ ತೀರ್ಪನ್ನು ಕಾದಿರಿಸಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.
ಉ.	ಈ ಪ್ರಕರಣದಲ್ಲಿ ಬ್ಯಾಂಕಿಗೆ ನಷ್ಟವಾಗಿರುವ ಹಣವನ್ನು ಯಾರಿಂದ ವಸೂಲು ಮಾಡಲಾಗಿದೆ?		ಬ್ಯಾಂಕಿಗೆ ನಷ್ಟವಾಗಿರುವ ಹಣವನ್ನು ವಸೂಲು ಮಾಡಲು ನ್ಯಾಯಾಲಯದಲ್ಲಿ ದಾವೆ ಹೂಡಿದ್ದು ನ್ಯಾಯಾಲಯದ ತೀರ್ಪು ಬಂದ ನಂತರ ವಸೂಲಿ ಕ್ರಮ ಕೈಗೊಳ್ಳಲಾಗುವುದು.
ಊ.	ಈ ಪ್ರಕರಣವನ್ನು ನಿಭಾಯಿಸಲು ಬ್ಯಾಂಕು ಇಲ್ಲಿಯವರೆವಿಗೂ ವಿವಿಧ ಬಾಬ್ತುಗಳಿಗಾಗಿ ಎಷ್ಟು ಹಣವನ್ನು ವೆಚ್ಚ ಮಾಡಿದೆ (ಪೂರ್ಣ ವಿವರಗಳನ್ನು 3 ವರ್ಷಗಳ ಅಂಕಿ-ಅಂಶಗಳನ್ನು ಒದಗಿಸುವುದು)		ಈ ಪ್ರಕರಣವನ್ನು ನಿಭಾಯಿಸಲು ಬ್ಯಾಂಕು ಇಲ್ಲಿಯವರೆವಿಗೂ ರೂ.6.78.292.00 ಗಳನ್ನು ವೆಚ್ಚ ಮಾಡಿದೆ. ಕಳೆದ 3 ವರ್ಷಗಳ ಅಂಕಿ ಅಂಶ ಈ ಕೆಳಕಂಡಂತಿದೆ. 2005--06 — ರೂ. 50.000.00 2007–08 — ರೂ.1.63.292–00 2008–09 — – ಒಟ್ಟು — ರೂ.2.13.292–00
ಋ.	ಈ ಪ್ರಕರಣದಲ್ಲಿ ಬ್ಯಾಂಕಿನ ಎಷ್ಟು ಜನ ಅಧಿಕಾರಿಗಳು ನೌಕರರು ಭಾಗಿಯಾಗಿದ್ದಾರೆ. ಎಷ್ಟು ಜನರಿಗೆ		ಈ ಪ್ರಕರಣದಲ್ಲಿ ಒಟ್ಟು 21 ಜನ ಅಧಿಕಾರಿಗಳು ಹಾಗೂ 7 ಜನ ನೌಕರರು ಭಾಗಿಯಾಗಿದ್ದು

	ಶಿಕ್ಷೆಯಾಗಿದೆ. ಎಷ್ಟು ಜನರಿಗೆ ಬಡ್ತಿ ದೊರೆತಿದೆ. ಎಷ್ಟು ಜನ ನಿವೃತ್ತಿ ಹೊಂದಿದ್ದಾರೆ (ಸಿಬ್ಬಂದಿಯ ಹೆಸರು ವಿವರಗಳನ್ನು ಒದಗಿಸುವುದು) ಈ ಪ್ರಕರಣವನ್ನು ಚುರುಕುಗೊಳಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗುವುದು?		ಅವರುಗಳಿಗೆ ವಿಧಿಸಿರುವ ಶಿಕ್ಷೆ. ನೀಡಿರುವ ಬಡ್ತಿ. ಮತ್ತು ನಿವೃತ್ತಿ ವಿವರಗಳನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹೂಡಿರುವ ಕ್ರಿಮಿನಲ್ ಮೊಕದ್ದಮ್ಮೆಯನ್ನು ಶೀಘ್ರವಾಗಿ ಇತ್ಯರ್ಥಗೊಳಿಸಲು ಮಾನ್ಯ ಉಚ್ಚ ನ್ಯಾಯಾಲಯವನ್ನು ಕೋರಿದ್ದು. ಉಚ್ಚನ್ಯಾಯಾಲಯವು ಆದಷ್ಟು ಜಾಗ್ರತೆ ಇತ್ಯರ್ಥಗೊಳಿಸಲು ಕೆಳಗಿನ ನ್ಯಾಯಲಯಕ್ಕೆ ಆದೇಶಿಸಿದೆ. ಸಿವಿಲ್ ದಾವೆಗಳನ್ನು ಶೀಘ್ರವಾಗಿ ಇತ್ಯರ್ಥಗೊಳಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದೆ.
ಎ.	ಹಲವಾರು ವರ್ಷಗಳಿಂದ ಕುಂಟುತ್ತಾ ಸಾಗಿರುವ ಈ ಪ್ರಕರಣವನ್ನು ಲೋಕಾಯುಕ್ತಕ್ಕೆ ವಹಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ? ಇಲ್ಲದಿದ್ದಲ್ಲಿ ಕಾರಣಗಳೇನು?		ಈ ಪ್ರಕರಣದಲ್ಲಿ ಕಾನೂನು ಪ್ರಕಾರ ಎಲ್ಲಾ ಕ್ರಮಗಳನ್ನು ಕೈಗೊಂಡಿರುವುದರಿಂದ ಮಾನ್ಯ ಲೋಕಾಯುಕ್ತರಿಗೆ ವಹಿಸುವ ಅಗತ್ಯತೆ ಇರುವುದಿಲ್ಲ.

25th July 2008

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ
ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 231
ಅನುಬಂಧ _ 1

ಹಣ ದುರುಪಯೋಗ ಪ್ರಕರಣದಲ್ಲಿ ಪ್ರತ್ಯಕ್ಷವಾಗಿ ಭಾಗಿಯಾಗಿರುವ ನೌಕರರ ಹೆಸರುಗಳು

ಶ್ರೀ ಟಿ. ಸತ್ಯನಾರಾಯಣ	ಶ್ರೀ ಬಿ.ಎನ್. ನಾಗರಾಜರಾವ್
ಶ್ರೀ ಬಿ. ಲಿಂಗಪ್ಪ	ಶ್ರೀ ಎನ್.ಎ. ಕುಟ್ಟಯ್ಯ
ಶ್ರೀ ಎಂ. ನಾರಾಯಣ ರೆಡ್ಡಿ	ಶ್ರೀ ಎಸ್.ಎನ್. ಶ್ರೀನಿವಾಸ
ಶ್ರೀ ಎಲ್. ಮರಿಯಪ್ಪ	ಶ್ರೀ ಎಸ್. ಶಿವಕುಮಾರ್
ಶ್ರೀ ಬಿ. ಘಮ್ಮೇಗೌಡ	ಶ್ರೀ ಬಿ.ಎನ್. ಜಗನ್ನಾಥ್
ಶ್ರೀ ಅಣ್ಣೇಗೌಡ	ಶ್ರೀ ಕೆ. ಬೋರೇಗೌಡ
ಶ್ರೀ ಪಿ.ಎಸ್. ಸದಾಶಿವಯ್ಯ	ಶ್ರೀಮತಿ ವೈ.ರೆ. ಹೇಮಾಂಬ
ಶ್ರೀ ಎನ್.ಸಿ. ಮಲ್ಲಿಕಾರ್ಜುನಯ್ಯ	ಶ್ರೀ ವೆಂಕಟೇಶ್
ಶ್ರೀ ಸಿ.ಎ. ಕಲ್ಯಾಣಿ ಮಠ್	ಶ್ರೀಮತಿ ಡಿ. ಸರಸ್ವತಿ
ಶ್ರೀ ಗಿರಿರಾಜು	ಶ್ರೀಮತಿ ಬಿ.ಪಿ. ಹೇಮಲತ
ಶ್ರೀ ವಿ. ವರದರಾಜು	

ಪರೋಕ್ಷವಾಗಿ ಭಾಗಿಯಾಗಿರುವ ನೌಕರರು

1. ಶ್ರೀ ಹೆಚ್.ಎನ್. ಅಶ್ವತ್ಥನಾರಾಯಣ
2. ಶ್ರೀ ಎಫ್.ಬಿ. ಪಾಟೀಲ್
3. ಶ್ರೀ ವಿ. ನಟರಾಜ್
4. ಶ್ರೀ ಕೆ. ಸಿದ್ದೇಗೌಡ
5. ಶ್ರೀ ಎಂ. ಕರಿಬಸಪ್ಪ
6. ಶ್ರೀ ಟಿ.ಎನ್. ನಾಗರಾಜ್
7. ಶ್ರೀ ಟಿ. ತಿಮ್ಮಯ್ಯ

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 231

ಅನುಬಂಧ – 2

ಹಣದುರುಪಯೋಗ ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿಗಳ / ನೌಕರರುಗಳಿಗೆ ವಿಧಿಸಿರುವ ಶಿಕ್ಷೆ / ಬಡ್ತಿ ಮತ್ತು ನಿವೃತ್ತಿಯ ವಿವರ

ಕ್ರ ಸಂ.	ನೌಕರರ ಹೆಸರು ಮತ್ತು ಹುದ್ದೆ	ವಿಧಿಸಿರುವ ಶಿಕ್ಷೆ	ಬಡ್ತಿ ವಿವರ	ನಿವೃತ್ತಿ ವಿವರ
01.	ಶ್ರೀ ಟಿ. ಸತ್ಯನಾರಾಯಣ ವ್ಯವಸ್ಥಾಪಕರು	ವೇತನದಲ್ಲಿ 1 ಹಂತದ ಇಳಿಸಲಾಗಿದೆ	ಬಡ್ತಿ ನೀಡಿರುವುದಿಲ್ಲ	ನಿವೃತ್ತಿಯಾಗಿದ್ದಾರೆ
02.	ಶ್ರೀ ಬಿ. ಲಿಂಗಪ್ಪ ವ್ಯವಸ್ಥಾಪಕರು (ಪ್ರಭಾರ)	ರೂ.11.700.00ಗಳನ್ನು ನಿವೃತ್ತಿ ಸೌಲಭ್ಯದಿಂದ ಕಟಾಯಿಸಲಾಗಿದೆ	ಬಡ್ತಿ ನೀಡಿರುವುದಿಲ್ಲ	ನಿವೃತ್ತಿಯಾಗಿದ್ದಾರೆ
02.	ಶ್ರೀ ಎಂ. ನಾರಾಯಣ ರೆಡ್ಡಿ ವ್ಯವಸ್ಥಾಪಕರು	ವಿಚಾರಣೆಗೆ ಮೊದಲು ನಿಧನ ಹೊಂದಿರುತ್ತಾರೆ	ಬಡ್ತಿ ನೀಡಿರುವುದಿಲ್ಲ	ನಿವೃತ್ತಿಯಾಗಿದ್ದಾರೆ
04.	ಶ್ರೀ ಎಲ್. ಮರಿಯಪ್ಪ ವ್ಯವಸ್ಥಾಪಕರು (ಪ್ರಭಾರ)	ರೂ.8.000.00ಗಳನ್ನು ನಿವೃತ್ತಿ ಸೌಲಭ್ಯದಿಂದ ಕಟಾಯಿಸಲಾಗಿದೆ	ಬಡ್ತಿ ನೀಡಿರುವುದಿಲ್ಲ	ನಿವೃತ್ತಿಯಾಗಿದ್ದಾರೆ
05.	ಶ್ರಿ ಬಿ. ತಿಮ್ಮೇಗೌಡ ವ್ಯವಸ್ಥಾಪಕರು (ಪ್ರಭಾರ)	ಒಂದು ವೇತನ ಮುಂಬಡ್ತಿ ತಡೆಹಿಡಿಯಲಾಗಿದೆ	ಬಡ್ತಿ ನೀಡಿರುವುದಿಲ್ಲ	ನಿವೃತ್ತಿಯಾಗಿದ್ದಾರೆ
06.	ಶ್ರೀ ಅಣ್ಣೇಗೌಡ. ವ್ಯವಸ್ಥಾಪಕರು	ಸೇವೆಯಿಂದ ವಜಾ ಮಾಡಲಾಗಿದೆ	–	–
07	ಶ್ರೀ ಪಿ.ಎಸ್. ಸದಾಶಿವಯ್ಯ ವ್ಯವಸ್ಥಾಪಕರು (ಪ್ರಭಾರ)	ವೇತನ ಶ್ರೇಣಿಯ ಕೊನೆಯ ಹಂತಕ್ಕೆ ಇಳಿಸಲಾಗಿದೆ	ಬಡ್ತಿ ನೀಡಿರುವುದಿಲ್ಲ	ನಿವೃತ್ತಿಯಾಗಿದ್ದಾರೆ

08.	ಶ್ರೀ ಎನ್.ಸಿ. ಮಲ್ಲಿಕಾರ್ಜುನಯ್ಯ ವ್ಯವಸ್ಥಾಪಕರು	ಎಚ್ಚರಿಕೆ ನೀಡಲಾಗಿದೆ	ಬಡ್ತಿ ನೀಡಲಾಗಿದೆ	ನಿವೃತ್ತಿಯಾಗಿದ್ದಾರೆ
09.	ಶ್ರೀ ಎ.ಎ. ಕಲ್ಯಾಣಿ ಮಠ್ ವ್ಯವಸ್ಥಾಪಕರು (ಪ್ರಭಾರ)	ಶಿಕ್ಷೆ ವಿಧಿಸಲಾಗಿದ್ದು ಮೇಲ್ಮನವಿಯಲ್ಲಿ ವಿಧಿಸಿದ ಶಿಕ್ಷೆಯನ್ನು ರದ್ದುಪಡಿಸಲಾಗಿದೆ	ಬಡ್ತಿ ನೀಡಲಾಗಿದೆ	ನಿವೃತ್ತಿಯಾಗಿದ್ದಾರೆ
10.	ಶ್ರೀ ಗಿರಿರಾಜು. ವ್ಯವಸ್ಥಾಪಕರು	ವಿಚಾರಣಾ ನಡವಳಿಗಳನ್ನು ಕೈಬಿಡಲಾಗಿದೆ	ಬಡ್ತಿ ನೀಡಲಾಗಿದೆ	ನಿವೃತ್ತಿಯಾಗಿದ್ದಾರೆ
11.	ಶ್ರೀ ವಿ. ವರದರಾಜು. ವ್ಯವಸ್ಥಾಪಕರು (ಪ್ರಭಾರ)	ಒಂದು ವೇತನ ತಡೆಹಿಡಿಯಲಾಗಿದೆ	ಬಡ್ತಿ ನೀಡಲಾಗಿದೆ	ಸ್ವಯಂ ನಿವೃತ್ತಿಯಾಗಿದ್ದಾರೆ
12.	ಶ್ರೀ ಬಿ.ಎನ್. ನಾಗರಾಜರಾವ್. ವ್ಯವಸ್ಥಾಪಕರು (ಪ್ರಭಾರ)	ಒಂದು ವೇತನ ಮುಂಬಡ್ತಿ ತಡೆಹಿಡಿಯಲಾಗಿದೆ	ಬಡ್ತಿ ನೀಡಲಾಗಿದೆ	ನಿವೃತ್ತಿಯಾಗಿದ್ದಾರೆ
13.	ಶ್ರೀ ಎನ್.ಎ. ಕುಟ್ಟಯ್ಯ ವ್ಯವಸ್ಥಾಪಕರು (ಪ್ರಭಾರ)	ವಿಚಾರಣಾ ನಡವಳಿಗಳನ್ನು ಕೈಬಿಡಲಾಗಿದೆ	ಬಡ್ತಿ ನೀಡಲಾಗಿದೆ	ನಿವೃತ್ತಿಯಾಗಿದ್ದಾರೆ
14.	ಶ್ರೀ ಎಸ್.ಎನ್. ಶ್ರೀನಿವಾಸ್ ವ್ಯವಸ್ಥಾಪಕರು (ಪ್ರಭಾರ)	ಎಚ್ಚರಿಕೆ ನೀಡಲಾಗಿದೆ	ಬಡ್ತಿ ನೀಡಲಾಗಿದೆ	ನಿವೃತ್ತಿಯಾಗಿದ್ದಾರೆ
15.	ಶ್ರೀ ಎಸ್. ಶಿವಕುಮಾರ್. ಪಾರಾಣಾಧಿಕಾರಿ	ಎಚ್ಚರಿಕೆ ನೀಡಲಾಗಿದೆ	ಬಡ್ತಿ ನೀಡಲಾಗಿದೆ	ನಿವೃತ್ತಿಯಾಗಿದ್ದಾರೆ

16.	ಶ್ರೀ ಬಿ.ಎನ್. ಜಗನ್ನಾಥ್ ಗುಮಾಸ್ತರು ಹಾಗೂ ನಗದು ಗುಮಾಸ್ತರು	ಸೇವೆಯಿಂದ ವಜಾ ಮಾಡಲಾಗಿದೆ	-	-
17.	ಶ್ರೀ ಕೆ. ಬೋರೇಗೌಡ. ಗುಮಾಸ್ತರು ಹಾಗೂ ನಗದು ಗುಮಾಸ್ತರು	ವಿಚಾರಣಾ ನಡವಳಿಗಳನ್ನು ಕೈಬಿಡಲಾಗಿದೆ	ಬಡ್ತಿ ನೀಡಲಾಗಿದೆ	ನಿವೃತ್ತಿಯಾಗಿದ್ದಾರೆ
18.	ಶ್ರೀಮತಿ ವೈ.ಕೆ. ಹೇಮಾಂಬ. ಗುಮಾಸ್ತರು ಹಾಗೂ ನಗದು ಗುಮಾಸ್ತರು	ವಿಚಾರಣೆಯನ್ನು ಕೈಬಿಡಲಾಗಿದೆ	ಬಡ್ತಿ ನೀಡಲಾಗಿದೆ	ಸೇವೆಯಲ್ಲಿದ್ದಾರೆ
19.	ಶ್ರೀ ವೆಂಕಟೇಶ್. ಗುಮಾಸ್ತರು ಹಾಗು ನಗದು ಗುಮಾಸ್ತರು	ಎಚ್ಚರಿಕೆ ನೀಡಲಾಗಿದೆ	ಬಡ್ತಿ ನೀಡಲಾಗಿದೆ	ನಿವೃತ್ತಿಯಾಗಿದ್ದಾರೆ
20.	ಶ್ರೀಮತಿ ಡಿ. ಸರಸ್ವತಿ ಗುಮಾಸ್ತರು ಹಾಗೂ ನಗದು ಗುಮಾಸ್ತರು	ಎಚ್ಚರಿಕೆ ನೀಡಲಾಗಿದೆ	ಬಡ್ತಿ ನೀಡಲಾಗಿದೆ	ಸ್ವಯಂ ನಿವೃತ್ತಿಯಾಗಿದ್ದಾರೆ
21.	ಶ್ರೀಮತಿ ಬಿ. ಹೇಮಲತ. ಗುಮಾಸ್ತರು	ಒಂದು ವೇತನ ಮುಂಬಡ್ತಿ ತಡೆಹಿಡಿಯಲಾಗಿದೆ	ಬಡ್ತಿ ನೀಡಲಾಗಿದೆ	ಸೇವೆಯಲ್ಲಿದ್ದಾರೆ
22.	ಶ್ರೀ ಹೆಚ್.ಎನ್. ಅಶ್ವತ್ಥನಾರಾಯಣ, ಆಂತರಿಕ ಲೆಕ್ಕ ತಪಾಸಿಗರು	ವಿಚಾರಣಾ ನಡವಳಿಗಳನ್ನು ಕೈಬಿಡಲಾಗಿದೆ	ಬಡ್ತಿ ನೀಡಲಾಗಿದೆ	ನಿವೃತ್ತಿಯಾಗಿದ್ದಾರೆ
23.	ಶ್ರೀ ಎಫ್.ಬಿ. ಪಾಟೀಲ್. ಆಂತರಿಕ ಲೆಕ್ಕ ತಪಾಸಿಗರು.	ಶಿಕ್ಷೆ ವಿಧಿಸಲಾಗಿದ್ದು ಮೇಲ್ಮನವಿಯಲ್ಲಿ ವಿಧಿಸಿದ ಶಿಕ್ಷೆಯನ್ನು ರದ್ದುಪಡಿಸಲಾಗಿದೆ	ಬಡ್ತಿ ನೀಡಲಾಗಿದೆ	ನಿವೃತ್ತಿಯಾಗಿದ್ದಾರೆ

24.	ಶ್ರೀ ವಿ. ನಟರಾಜ್ ಆಂತರಿಕ ಲೆಕ್ಕ ತಪಾಸಿಗರು	ವಿಚಾರಣಾ ನಡವಳಿಗಳನ್ನು ಕೈಬಿಡಲಾಗಿದೆ	ಬಡ್ತಿ ನೀಡಲಾಗಿದೆ	ನಿವೃತ್ತಿಯಾಗಿದ್ದಾರೆ
25.	ಶ್ರೀ ಕೆ. ಸಿದ್ದೇಗೌಡ. ಆಂತರಿಕ ಲೆಕ್ಕ ತಪಾಸಿಗರು	ಎಚ್ಚರಿಕೆ ನೀಡಲಾಗಿದೆ	ಬಡ್ತಿ ನೀಡಲಾಗಿದೆ	ನಿವೃತ್ತಿಯಾಗಿದ್ದಾರೆ
26.	ಶ್ರೀ ಎಂ. ಕರಿಬಸಪ್ಪ. ಆಂತರಿಕ ಲೆಕ್ಕ ತಪಾಸಿಗರು	ಎರಡು ವೇತನ ಮುಂಬಡ್ತಿ ತಡೆಹಿಡಿಯಲಾಗಿದೆ	ಬಡ್ತಿ ನೀಡಲಾಗಿದೆ	ನಿವೃತ್ತಿಯಾಗಿದ್ದಾರೆ
27.	ಶ್ರೀ ಟಿ.ಎನ್. ನಾಗರಾಜ್. ಆಂತರಿಕ ಲೆಕ್ಕ ತಪಾಸಿಗರು	ಎಚ್ಚರಿಕೆ ನೀಡಲಾಗಿದೆ	ಬಡ್ತಿ ನೀಡಲಾಗಿಲ್ಲ	ನಿವೃತ್ತಿಯಾಗಿದ್ದಾರೆ
28.	ಶ್ರೀ ಟಿ. ತಿಮ್ಮಯ್ಯ ಜವಾನರು	ಎರಡು ವೇತನ ಮುಂಬಡ್ತಿ ತಡೆಹಿಡಿಯಲಾಗಿದೆ	ಬಡ್ತಿ ನೀಡಲಾಗಿಲ್ಲ	ನಿಧನ ಹೊಂದಿರುತ್ತಾರೆ